2. ಬ್ರಹ್ಮಾವರ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯಂವ ಕೆಲಸ ವಿಳಂಬವಾಗಿರುವುದು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಬ್ರಹ್ಮಾವರದಲ್ಲಿರುವ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕೆಲಸ ಪ್ರಾರಂಭಿಸಲು ಒಂದು ತಿಂಗಳು ವಿಳಂಬವಾಯಿತು. ರೈತರು ಬೆಳೆದ ಕಬ್ಬು ಒಣಗಹತ್ತಿದೆ ನೀರಿನ ಟ್ಯಾಂಕಿ ಸೋರಿ ದುರಸ್ತಿಗೆ ವಿಳಂಬವಾಗಿದೆ. ಆಡಳಿತ ನಿರ್ದೇಶಕರ ವರ್ಗಾವಣೆ ಆಗಿ, ಸಹಕಾರಿ ಸಂಸ್ಥೆಗಳ ಡೆಪ್ಯೂಟಿ ರಿಜಿಸ್ಟ್ರಾರರವರು ಇನ್-ಚಾರ್ಜ್ ಆಡಳಿತವನ್ನು ಮಂಗಳೂರಿನಿಂದ " ರಿಪೋರ್ಟ್ ಕಂಟ್ರೋಲ್ " ರೀತಿಯಲ್ಲಿ ನಡೆಸುತ್ತಿದ್ದಾರೆ. ಆಡಳಿತ ಮಂಡಳಿ ಅಧ್ಯಕ್ಷರು ಅಮೇರಿಕಾಕ್ಕೆ ತೆರಳಿ ಅನೇಕ ತಿಂಗಳುಗಳಾದುವು. ಅಸೌಖ್ಯದಿಂದಾಗಿ ಅವರು ಬಂದಿಲ್ಲ. ಆಡಳಿತ ಮಂಡಳಿ ಸಭೆ ನಡೆಯುತ್ತಿಲ್ಲ. ರಾಜ್ಯದ ಸಕ್ಕರೆ ತಜ್ಞರ ಮಾರ್ಗದರ್ಶನ ಇದಕ್ಕೆ ಸಿಕ್ಕಿಲ್ಲ. ನ್ಯೂನತೆಗಳನ್ನು ಸರಿಪಡಿಸಿಲ್ಲ. ಈ ಕಾರ್ಖಾನೆ ದಕ್ಷಿಣಕನ್ನಡ ಜಿಲ್ಲೆಯ ರೈತರ ಬದುಕಿಗೆ ಕಾಮಧೇನು ಆಗಬಲ್ಲುದಾಗಿದೆ. ಆದ್ದರಿಂದ ಎಲ್ಲಾ ವ್ಯವಸ್ಥೆಗಳೂ ಸುಸೂತ್ರವಾಗಿ ಆಗುವಂತೆ ಕಾರ್ಖಾನೆಯು ಆಡಳಿತ ಸಮರ್ಪಕವಾಗಿ ಜರುಗುವಂತೆ, ರೈತರಿಗೆ ಬೇಕಾದ ಸವಲತ್ತು ಸಕಾಲದಲ್ಲಿ ಒದಗುವಂತೆ, ಮತ್ತು ಆರ್ಥಿಕ ಬಿಕ್ಕಟ್ಟು ಬಾರದಂತೆ ನೋಡಿಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇವೆ.

SRI R. B. POTDAR (Minister for Industrial Cooperatives).—I wish to make the following statement.

I agree to some of the issues stated by the Hon'ble Member in his Notice. As usual, the Dakshina Kannada Sahakara Sakkare Karkhane Ltd. Started crushing operations during December 1987 for the current season. After starting crushing operations for a few days (3 to 4 days), there was a leakage in the spray pond and immediately action was taken to effect repairs to the spray pond and the leakage was arrested and the Karkhane has now been re-started. The experts of the State Sugar Federation were deputed to suggest measures to set right all defects and action is being taken to run the Karkhane on sound lines.

8. ಉಜಿರೆ ಮಂಜುನಾಥೇಶ್ವರ ಕಾಲೇಜಿನ ವಿದ್ಯಾರ್ಥಿ ಪದ್ಮಲತಾಳ ಸಾವಿನ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ್ಗದಂ.

ಶ್ರೀ ಕೆ. ವಸಂತಬಂಗೇರ —ಮಾನ್ಯ ಅಧ್ಯಕ್ಷರೇ, ಕೆಲವು ಸಮಯದ ಹಿಂದೆ ನನ್ನ ಕ್ಷೇತ್ರವಾದ ಬೆಳ್ತಂಗಡಿ ತಾಲ್ಲೂಕಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಉಜಿರೆ ಇಲ್ಲಿಯ ವಿದ್ಯಾರ್ಥಿನಿಯಾದ ಕು. ಪದ್ಮಲತಾ ಇವಳ ಸಾವಿನ ಬಗ್ಗೆ ಸಿ. ಓ. ಡಿ. ತನಿಖೆ ನಡೆಸಬೇಕೆಂದು ವಿಧಾನಸಭೆಯಲ್ಲಿ ಒತ್ತಾಯಪಡಿಸಿದಂತೆ ತಾವು ಸಿ. ಓ. ಡಿ. ತನಿಖೆಗೆ ಆಜ್ಞಾಪಿಸಿ ಶ್ರೀ ಜಗನ್ನಾಥರೈ ಸರ್ಕಲ್ ಇನ್ಸ್‌ಪೆಕ್ಟರ್ ಇವರ ನೇತೃತ್ವದಲ್ಲಿ ತನಿಖೆ ಪ್ರಾರಂಭವಾಯಿತು. ಅವರು ತನಿಖೆ ನಡೆಸಿ ಒಂದು ಹಂತದಲ್ಲಿ ತಪ್ಪಿತಸ್ಥರನ್ನು ಗೊತ್ತುಮಾಡಿಕೊಂಡು ಬಂಧಿಸುವ ಹಂತದಲ್ಲಿರುವಾಗ ಸಿ.ಓ.ಡಿ. ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ಶ್ರೀ ಜಗನ್ನಾಥರೈಗಳು ತನಿಖೆಯನ್ನು ತಕ್ಷಣ ನಿಲ್ಲಿಸಿ ಫೈಲು ಸಮೇತ ವಾಪಸು ಬರ ಬೇಕೆಂದು ಆಜ್ಞಾಪಿಸಿದರು. ಅಂತೆಯೇ ಅವರು ತನಿಖೆಯನ್ನು ತಕ್ಷಣ ನಿಲ್ಲಿಸಿ ತನಿಖೆ ಫೈಲು ಸಮೇತ ವಾಪಸು ಬೆಂಗಳೂರಿಗೆ ಬಂದು ಫೈಲನ್ನು ಹಿರಿಯ ಅಧಿಕಾರಿಗಳಿಗೆ ಒಪ್ಪಿಸಿದಂತೆ ಅವರನ್ನು ರಜೆಯ ಮೇಲೆ ಮನೆಗೆ ಹೋಗುವಂತೆ ಆಜ್ಞೆಯಾದಂತೆ, ಶ್ರೀ ರೈಗಳು ರಜೆ ಹಾಕಿ ಮನೆಗೆ ಹೋದರು. ಅದರ ನಂತರ ಸದರಿ ಕೇಸಿನ ತನಿಖೆಗಾಗಿ ಡಿ. ವೈ. ಎಸ್. ಪಿ. ಯವರನ್ನು ಕಳುಹಿಸಲಾಯಿತು. ಸದರಿ ಡಿವೈಎಸ್‌ಪಿಯವರು ಸಿ. ಓ. ಡಿ. ಹಿರಿಯ ಅಧಿಕಾರಿಗಳ ಆದೇಶದಂತೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಂದು

ತಿಂಗಳು ಕಾಲಹರಣ ಮಾಡಿ ಯಾವುದೇ ರೀತಿಯ ತನಿಖೆ ನಡೆಸದೆ ತಪ್ಪಿತಸ್ಥರ ಪತ್ತೆಯಾಗುವುದಿಲ್ಲ ವೆಂದು ಸದರಿ ಕೇಸ್ ಫೈಲನ್ನು ಪೂರ್ಣಗೊಳಿಸಿ ತನಿಖೆಗೆ ಇತಿಶ್ರೀ ಹಾಕಿ ಫೈಲನ್ನು ಕ್ಲೋಸ್ ಮಾಡಿ ದರು. ಆ ಪ್ರಕಾರ ಸದರಿ ಕೇಸಿನಲ್ಲಿ ಶಾಮೀಲಾಗಿರುವ ಕೊಲೆಗಡುಕ-ನ್ನು ಸಿ. ಓ. ಡಿ. ಅಧಿಕಾರಿ ಗಳಿಂದಲೇ ಬಂದಿಸಿ, ಕೇಸು ದಾಖಲು ಮಾಡುವ ಬದಲು ಅವರಿಗೇ ರಕ್ಷಣೆ ಕೊಟ್ಟು ಇನ್ನೂ ಹೆಚ್ಚು ಕೊಲೆ ಮಾಡುವಂತೆ ಪ್ರೋತ್ಸಾಹವನ್ನು ಕೊಟ್ಟರು. ಅಲ್ಲದೇ ಕಳೆದ ವಿಧಾನ ಸಭೆಯಲ್ಲಿ ಈ ವಿಚಾರ ದಲ್ಲಿ ಮಾನ್ಯ ಗೃಹ ಸಚಿವರಿಗೆ ಪ್ರಶ್ನೆ ಹಾಕಿದಾಗ ಅಧಿಕಾರಿಗಳಿಂದ ಬಂದ ಸತ್ಯಕ್ಕೆ ದೂರವಾದ ಉತ್ತರ ವನ್ನು ಮಾನ್ಯ ಸಚಿವರು ಸದನದಲ್ಲಿ ಓದಿದರು. ಸದರಿ ಕೇಸಿನಲ್ಲಿ ಶಾಮೀಲಾದ ಕೊಲೆಗಡುಕರನ್ನು ಪತ್ತೆಹಚ್ಚಲು ಶ್ರೀ ಜಗನ್ನಾಥರೈ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ (ಸಿಓಡಿ) ಇವರನ್ನೇ ತನಿಖೆ ಮಾಡಲು ಕಳುಹಿಸಿಕೊಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ. ಅಲ್ಲದೇ ಕೊಲೆಗಡುಕರಿಗೆ ರಕ್ಷಣೆ ಒದಗಿಸಿ ಕೊಲೆಯನ್ನು ಮರೆ ಮಾಡಲು ಪ್ರಯತ್ನಿಸಿದ ಸಿ. ಓ. ಡಿ. ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗೃಹ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ ಉಜಿರೆ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಪದ್ಮಲತಾರವರ ಕೊಲೆ ಸಂಬಂಧವಾದ ಬೆಳ್ತಂಗಡಿ ಠಾಣೆಯ ಅಪರಾಧ ಸಂಖ್ಯೆ ೧೭/೬೭ ಐಪಿಸಿ ಕಲಂ ೩೦೨, ೨೧೧ರ ಮೊಕದ್ದಮೆ ದಾಖಲು ಮಾಡಿಕೊಂಡಿದ್ದು, ಅದನ್ನು ಸಿ. ಓ. ಡಿ. ತನಿಖೆಗೆ ವಹಿಸಲಾಯಿತು. ಸಿ. ಓ. ಡಿ. ಇನ್ಸ್‌ಪೆಕ್ಟರ್‌ರಾದ ಜಗನ್ನಾಥರೈ ಅವರಿಗೆ ಈ ಕೇಸಿನ ತನಿಖೆ ಯನ್ನು ಒಪ್ಪಿಸಿದ್ದು, ಅದರ ಬಗ್ಗೆ ಶಾಸಕರಿಂದ ಶ್ರೀ ವಿನಯಕುಮಾರ್ ಸೊರಕೆ ಇವರು ದಿನಾಂಕ ೨೫ನೇ ಮಾರ್ಚ್ ೧೯೬೭ರಂದು ಗೃಹ ಮಂತ್ರಿಯವರಿಗೆ ಮನವಿಯನ್ನು ಸಲ್ಲಿಸಿ, ಇನ್ಸ್‌ಪೆಕ್ಟರ್ ಜಗನ್ನಾಥ್‌ರೈರವರು ಆದೇ ಸ್ಥಳದವರಾಗಿದ್ದು, ಅವರಿಂದಲೇ ತನಿಖೆಯನ್ನು ಮುಂದುವರೆಸುವುದು ಸೂಕ್ತವಲ್ಲವೆಂದು ಮನವಿ ಸಲ್ಲಿಸಿದ್ದು, ಗೃಹ ಮಂತ್ರಿಯವರು ಪ್ರಕರಣದ ತನಿಖೆಯನ್ನು ಮತ್ತೊಬ್ಬ ಅಧಿಕಾರಿಗೆ ವಹಿಸಲು ಆದೇಶಿಸಿದರು. ಸದರಿ ಆದೇಶದಂತೆ ಸಿ. ಓ. ಡಿ. ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್ ಹೆಚ್. ಎಂ. ವೀರಿಸ್ವಾಮಿ ಅವರಿಗೆ ತನಿಖೆಯನ್ನು ವಹಿಸಿಕೊಡಲಾಯಿತು. ಜಗನ್ನಾಥ್‌ರೈರವರ ವರದಿಗೂ ಶ್ರೀ ವೀರಿಸ್ವಾಮಿಯವರ ವರದಿಗೂ ಬಹಳ ವ್ಯತ್ಯಾಸವೇನೂ ಕಾಣುವುದಿಲ್ಲ.

ಶ್ರೀ ವಿನಯಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೇ,

(ಹಲವು ಸದಸ್ಯರು ಎದ್ದು ಮಾತನಾಡುತ್ತಿದ್ದರು)

(ಗೊಂದಲ)

೧-೩೦ ಪಿ. ಎಂ.

ಅಧ್ಯಕ್ಷರು.—ಈಗ ದಯವಿಟ್ಟು ತಾವುಗಳು ಎಲ್ಲರೂ ಕುಳಿತುಕೊಳ್ಳಬೇಕಾಗಿ. ತಾವುಗಳು ಹೊಸಬರು. ಮೂರು ವರ್ಷಗಳಾದರೂ ಇನ್ನೂ ತಾವು ರೂಲ್ಸನ್ನು ಓದಿಲ್ಲ ಎಂದು ಹೇಳ ಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಗಲಾಟೆ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ.

(ಗೊಂದಲ)

ಅಧ್ಯಕ್ಷರು.—ನಿಯಮ ೩೫ರ ಕೆಳಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆದುದರಿಂದ ಮುಂದಿನ ವಿಷಯವನ್ನು ಮಾನ್ಯ ಸದಸ್ಯೆಯರಾದ ಮನೋರಮಾ ಮಧ್ವರಾಜ್‌ರವರು ಓದಬಹುದು.

(ಗೊಂದಲ)

ಶ್ರೀ ಕೆ. ವಸಂತ ಬಂಗೇರಾ.—ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾದ ಉತ್ತರವಾಗಿದೆ.....

ಅಧ್ಯಕ್ಷರು.—ನಿಯಮ ೩೩೪ರ ಕೆಳಗೆ ಹೆಚ್ಚಿನ ಚರ್ಚೆಗೆ ಅವಕಾಶ ಇರುವುದಿಲ್ಲ ಎಂದು ಹೇಳಿದ್ದೇನೆ. ಮಾನ್ಯ ವಿನಯಕುಮಾರ್ ಸೊರಕೆಯವರು ಬೇಕಾದರೆ ನಾಳೆ ಇನ್ನೊಂದು ೩೩೪ರ ಕೆಳಗೆ ಕೊಡಬಹುದು. ಈಗ ಎಲ್ಲರೂ ಕುಳಿತುಕೊಳ್ಳಬೇಕು. ಯಾರೂ ಬೇರೆಯವರು ಮಾತನಾಡಿದುದು ರೆಕಾರ್ಡ್‌ಗೆ ಹೋಗುವುದಿಲ್ಲ...

ಶ್ರೀ ಕೆ. ವಸಂತ ಬಂಗೇರ.—ಈ ವಿಷಯವನ್ನು ನಾನು ಕೇಳಿದುದು. ನನಗೆ ಸರಿಯಾದ ಉತ್ತರ ಬೇಕು...

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ಮುಂದಿನ ನಿಯಮ ೩೩೪ರ ಪ್ರಕಾರ ಮನೋರಮ ಮಧ್ವರಾಜ್‌ರವರು ಓದಬಹುದು.

೯. ರಾಜ್ಯದಲ್ಲಿ ಅನಾಥಾಶ್ರಮಗಳಿಂದ ಹೊರಬಂದವರಿಗೆ ಸರ್ಕಾರದಲ್ಲಿ ಹುದ್ದೆಗಳ ಮೀಸಲಾತಿಯ ಬಗ್ಗೆ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—"ರಾಜ್ಯದಲ್ಲಿ ಅನೇಕ ಅನಾಥಾಶ್ರಮಗಳನ್ನು, ಧಾರ್ಮಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳು ನಡೆಸುತ್ತಿದ್ದು, ಅಲ್ಲಿನ ಅನಾಥ ಮಕ್ಕಳು ಯಾವ ಜಾತಿ ಅಥವಾ ಮತಕ್ಕೆ ಸೇರಿರುವುದಿಲ್ಲ. ಅಲ್ಲದೆ ಅವರಿಗೆ ಯಾವುದೇ ವಿಧವಾದ ಅಂತಸ್ತು (ಸ್ಟೇಟಸ್) ಇರುವುದಿಲ್ಲ. ಈ ಸಂಸ್ಥೆಗಳಿಂದ ಹೊರ ಬರತಕ್ಕ ಅವರಿಗೆ ನೆಲೆಯಾಗಲೀ, ಜೀವನಾಧಾರವಾಗಲೀ ಇಲ್ಲದಿದ್ದು, ಅವರು ನೀರಿನಿಂದ ಹೊರ ಬಂದ ಮೀನಿನಂತಾಗುತ್ತಾರೆ. ಇಂತಹ ಅನಾಥರಿಗಾಗಿ ಮಹಾರಾಷ್ಟ್ರದ ರಾಜ್ಯ ಸರಕಾರದಲ್ಲಿ ನೌಕರಿ ಪಡೆದು ಕೊಳ್ಳುವ ಸಲುವಾಗಿ ಕೆಲವು ಹುದ್ದೆಗಳನ್ನು ಮೀಸಲಾಗಿಡಲಾಗಿದೆ ಇವರು ದೇಶದ ಮುಂದಿನ ಪ್ರಜೆಗಳಾಗಿರುವುದರಿಂದ ಅವರಿಗೆ ನೌಕರಿ ಒದಗಿಸುವುದಲ್ಲದೆ ನೆಲೆಯನ್ನೂ ಒದಗಿಸುವುದು ಸರಕಾರದವರ ಆದ್ಯಕರ್ತವ್ಯವಾಗಿದೆ. ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮವೂ ಸಹ ಇಂತಹ ಅನಾಥ ಮಕ್ಕಳ ಸಂಸ್ಥೆಯಾಗಿದ್ದು ಅಲ್ಲಿಂದ ಹೊರಬಂದ ಅನೇಕರು ಇಡೀ ದೇಶದಲ್ಲಿ ದೇಶದ ಸೇವೆ ಮಾಡುತ್ತಿರುವುದಲ್ಲದೆ ಪರದೇಶಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಆದ್ದರಿಂದ ಇಂತಹ ಸಂಸ್ಥೆಗಳಿಂದ ಬರತಕ್ಕ ಯುವಕ ಯುವತಿಯರಿಗಾಗಿ ಸರಕಾರದ ಹುದ್ದೆಗಳಲ್ಲಿ ಹಾಗೂ ಅರೆ ಸರಕಾರಿ ಉದ್ದಿಮೆಗಳಲ್ಲಿ ಹುದ್ದೆಗಳನ್ನು ಮೀಸಲಿಡುವ ಮೂಲಕ ಅನಾಥ ಮಕ್ಕಳ ಕಲ್ಯಾಣ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ಈ ವಿಚಾರವಾಗಿ ಸದರಿ ಶ್ರದ್ಧಾನಂದ ಆಶ್ರಮದವರು ಮತ್ತು ಸನ್ಮಾನ್ಯ ಸದಸ್ಯೆಯವರು ಸಂಬಂಧಪಟ್ಟ ಮಾನ್ಯ ಮಂತ್ರಿಯವರಿಗೆ ಈಗಾಗಲೇ ಮನವಿಯನ್ನು ಕಳುಹಿಸಿದ್ದಾರೆ. ಈಗ ಇಲ್ಲಿ ನಾನು ಮಂತ್ರಿಗಳ ಪರವಾಗಿ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ವಿಷಯವನ್ನು ತಂದು, ಉತ್ತರವನ್ನು ತರಿಸಿಕೊಡುತ್ತೇನೆ.

೧೦. ಬೈಂದೂರಿನ ಸರ್ಕಾರಿ ಪ್ರಾಥಮಿಕ ದರ್ಜೆ ಕಾಲೇಜಿನ ಕಟ್ಟಡವನ್ನು ಕೂಡಲೇ ಪ್ರಾರಂಭಿಸುವುದು.

ಶ್ರೀ ಜಿ. ಎಸ್ ಆಚಾರ್.—"ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಪ್ರಥಮ ದರ್ಜೆಯ ಸರಕಾರಿ ಕಾಲೇಜು. ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆಯುತ್ತಿದೆ. ಅನೇಕ ವರ್ಷಗಳಿಂದ ಈ ಪರಿಸ್ಥಿತಿ ಇದ್ದು, ಉಭಯ ಸಂಸ್ಥೆಗಳಿಗೂ ಇದರಿಂದ ತೊಂದರೆಯಾಗಿದೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಕಟ್ಟಿಸಲು ಸರಕಾರವನ್ನು ಒತ್ತಾಯಿಸಿದಾಗ, ೧೯೮೬-೮೭ರಲ್ಲಿ ಕಟ್ಟಿಸಲು ಸೂಕ್ತ ಕ್ರಮಕೈಕೊಳ್ಳುವುದಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಆಶ್ವಾಸನೆ ನೀಡಿದ್ದರು. ಆಯವ್ಯಯ ಪಟ್ಟಿಯಲ್ಲಿ ಸಹಾ ಹಣ ಕಾದಿರಿಸಲಾಯಿತು. ಶಂಕುಸ್ಥಾಪನೆಗೆ ದಿನ ಕೂಡ ನಿಗದಿ ಪಡಿಸಲಾಯಿತು. ಆದರೆ ಸಮಾರಂಭ ಮುಂದೂಡಲ್ಪಟ್ಟಿತು. ಕಟ್ಟಡದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಎರಡೂ ವಿದ್ಯಾಸಂಸ್ಥೆಗಳಲ್ಲಿ ತೊಂದರೆ ಮುಂದುವರಿಯುತ್ತಲೇ ಇದೆ. ಬೈಂದೂರ ಪ್ರಥಮ ದರ್ಜೆ ಸರಕಾರಿ ಕಾಲೇಜಿನ ಕಟ್ಟಡ ರಚನಾ ಕಾರ್ಯ ಕೂಡಲೇ ಪ್ರಾರಂಭಿಸಬೇಕೆಂದು ಮರಳಿ ನಾನು ಒತ್ತಾಯಿಸುತ್ತೇನೆ.